# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.233/2021

ಸಿಡಬ್ಲ್ಯೂ ಃ **2**
ಪಿಡಬ್ಲ್ಯೂ ಃ **5**

<u>ದಿನಾಂಕಃ **12-12-2024**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರು | - | ಖಾಜಾಮೋಹಿನುದ್ದೀನ್ |
| ತಂದೆಯ ಹೆಸರು | - | ರುಕ್ಮುದ್ದೀನ್ |
| ವಯಸ್ಸು | -? | **39** ವರ್ಷ |
| ಉದ್ಯೋಗ | - | ಗುತ್ತಿಗೆದಾರ |
| ವಾಸಸ್ಥಳಃ | - | ಯಾದಗಿರಿ. |

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ</u>

ಚಾಸಾ-3 ರವರ ಪರಿಚಯ ನನಗೆ ಇರುತ್ತದೆ. ದಿನಾಂಕಃ 08.02.2021 ರಂದು ನಾನು ಹಾಗೂ ನಮ್ಮ ಸಿಬ್ಬಂದಿಯವರೆಲ್ಲರೂ ಕೂಡಿ ಮೃತದೇಹವನ್ನು ನೋಡಲು ಸರಕಾರಿ ಆಸ್ಪತ್ರೆ ಯಾದಗಿರಿಗೆ ಹೋಗಿದ್ದೇವು. ಇಂದಿರ್ ಸಿಂಗನ ಮೃತದೇಹ ಆಸ್ಪತ್ರೆಯಲ್ಲಿ ಇತ್ತು. ನನ್ನ ಎದುರುರಿಗೆ ಶವಾ ಪಂಚನಾಮೆಯನ್ನು ಮಾಡಿ ಪೋಟೋವನ್ನು ತೆಗೆದಿರುತ್ತಾರೆ ಅಲ್ಲಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಶವಾ ತನಿಖಾ ವರದಿಯಾಗಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಮದ್ಯಾಹ್ನ 12 ಗಂಟೆಯಿಂದ 12-30 ಗಂಟೆಗೆ ಶವಾ ತನಿಖಾ ವರದಿಯವನ್ನು ತಯಾರಿಸಿರುತ್ತಾರೆ. ಸಾಕ್ಷಿಯು ಮೊದಲನೇಯ ಪೋಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಸದರಿ ಪೋಟೋವನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿರುತ್ತದೆ. ಕಾರು ಅಪಘಾತ ಆಗಿ ಇಂದಿರ್ ಸಿಂಗ್ ರವರು ಮೃತಪಟ್ಟಿದ್ದರು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಹೆಚ್.ಎಂ.ಪಿ ರವರಿಂದಃ

ನಾನು ಹಾಗೂ ಚಾಸಾ-8 ರವರು ಆತ್ಮೀಯರು ಆಗಿರುತ್ತೇವೆ ಎಂದರೆ ಸರಿ. ನನ್ನ ಜೊತೆಗೆ ಚಾಸಾ-8 ರವರು ಇವತ್ತು ಬಂದಿರುತ್ತಾರೆ. ನಿಪಿ 2 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ದಿನಾಂಕಃ 08.02.2021 ರಂದು ನಾನು ಯಾದಗಿರಿಯ ಸರಕಾರಿ ಆಸ್ಪತ್ರೆಗೆ ಹೋಗಿದ್ದಾಗ ಪೊಲೀಸರು ಶವಾ ತನಿಖಾ ವರದಿಯನ್ನು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಇಂದಿರ್ ಸಿಂಗ್ ರವರು ಕಾರು ಅಪಘಾತದಲ್ಲಿ ಮೃತಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-8 ರವರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.